"ಓಕೆ ಡಾರ್ಲಿಂಗ್..." ಮೆಲ್ಲನೆ ಉಲಿದಳು ಹುಡುಗಿ.

ಡಾರ್ಲಿಂಗ್! ನನಗೆ ಇನ್ನಿಲ್ಲದ ಸಂತೋಷವಾಯಿತು. ಪ್ರೊಫೆಸರರು ತಮ್ಮ ಮಗಳಿಗೆ ಭಾಷೆಯ ಬಳಕೆಯನ್ನು ಚೆನ್ನಾಗಿಯೇ ಕಲಿಸಿದ್ದಾರೆ ಎನಿಸಿತು. ಇನ್ನೇನು ಕಾರನ್ನು ಮುಂದೆ ಬಿಡಬೇಕು ಎನ್ನುವಷ್ಟರಲ್ಲಿ ಪ್ರೊಫೆಸರರು "ಒನ್ ಮಿನಿಟ್ ವಿಶಾಲ್... ಸ್ವಲ್ಪ ಒಳಗೆ ಬಾ..." ಎಂದು ಕೂಗಿದರು. ನಾನು ಕಾರು ಇಳಿದು ಒಳಗೆ ಹೋದೆ. ಚಾರ್ಜರ್ ಇದ್ದ ಬಾಕ್ಸನ್ನು ಬಿಚ್ಚಿ ತೋರಿಸಿ "ವಿಶ್ ಯೂ ಆಲ್ ದಿ ಬೆಸ್ಟ್... ಆದರೆ ಅದೊಂದು ರೋಬೋ, ಬರಿಯ ಯಂತ್ರ ಅನ್ನೋದನ್ನ ಮರೀಬೇಡ..." ಎಂದು ಎಚ್ಚರಿಸಿದರು. ಯಾಕೆ ಪದೇ ಪದೇ ಈ ಮಾತನ್ನು ಹೇಳುತ್ತಿದ್ದಾರೆ ಎಂದು ನನಗರ್ಥವಾಗಲಿಲ್ಲ.

ಕಾರು ಮುಂದೆ ನಡೆಸುತ್ತಲೇ ಹುಡುಗಿಯ ಕಡೆಗೊಮ್ಮೆ ನೋಡಿದೆ. ತಕ್ಷಣವೇ ಅವಳೂ ನನ್ನತ್ತ ನೋಡಿ ಮುಗುಳ್ನಕ್ಕಳು. ಸುಮ್ಮನೆ ಅವಳ ಕಾಲುಗಳ ಕಡೆ ದೃಷ್ಟಿ ಹರಿಸಿದೆ. ಬರಿಗಾಲಿನಲ್ಲಿ ಕುಳಿತಿದ್ದಳು. ನನಗೆ ಯಾಕೋ ಏನೋ ಕಸಿವಿಸಿಯಾಯಿತು. ಕಾರನ್ನು ಅಪಾರ್ಟ್‌ಮೆಂಟಿನ ಒಳಗೆ ನಡೆಸುವ ಬದಲು ಅತ್ತಿತ್ತ ನೋಡಿಕೊಂಡು ರಸ್ತೆಯಲ್ಲೇ ಮುನ್ನಡೆಸಿದೆ. ನಾನು ಯಾವುದಾದರೂ ಚಪ್ಪಲಿ ಅಂಗಡಿ ತೆರೆದಿದೆಯೇ ಎಂದು ನೋಡುತ್ತಿದ್ದೆ. ತುಸು ದೂರ ಕಾರನ್ನು ನಡೆಸಿದಾಗ ಜಾಲಹಳ್ಳಿ ಕ್ರಾಸಿನ ಬಳಿ ಒಂದು ಚಪ್ಪಲಿ ಅಂಗಡಿಯನ್ನು ಅದಾಗ ತಾನೇ ವ್ಯಕ್ತಿಯೊಬ್ಬ ತೆರೆಯುತ್ತಿರುವುದು ಕಾಣಿಸಿ ಕಾರು ನಿಲ್ಲಿಸಿದೆ. ಹುಡುಗಿಯನ್ನು ಕೆಳಗೆ ಇಳಿಸುವುದೋ ಬೇಡವೋ ಎಂದು ಗೊಂದಲವಾಯಿತು. ಅಂಗಡಿಯ ಬಾಗಿಲು ತೆಗೆದ ಮೇಲೆ ಕೆಳಗಿಳಿದು ಮುಂದೆ ನಿಂತು ಯೋಚಿಸಿದೆ. ಎದೆ ಡವಗುಟ್ಟತೊಡಗಿತು. ಧೈರ್ಯ ಮಾಡಿಕೊಂಡೆ.

ಕಾರಿನೊಳಗೆ ಬಗ್ಗಿ "ವಸೂ... ಕೆಳಗಿಳಿದು ಬಾ..." ಎಂದು ತುಸು ನಡುಗುವ ದನಿಯಲ್ಲಿ ಹೇಳಿದೆ.

"ಓಕೆ ಡಾರ್ಲಿಂಗ್..." ಎಂದವಳೇ ಕಾರಿನ ಬಾಗಿಲು ತೆಗೆದು ಕೆಳಗಿಳಿದು ನನ್ನನ್ನು ಹಿಂಬಾಲಿಸಿದಳು. ಅಂಗಡಿಯವನು "ಬನ್ನಿ ಸಾರ್... ಬನ್ನಿ ಮೇಡಂ..." ಎಂದು ಸ್ವಾಗತಿಸಿದ. ಹುಡುಗಿಯ ಬರಿಗಾಲನ್ನು ನೋಡಿದವನೇ "ಬನ್ನಿ ಮೇಡಂ... ಸೈಜು ನೋಡೋಣ..." ಎಂದು ಕಾಲಿನ ಅಳತೆಯನ್ನು ನೋಡುವ ಪೆಟ್ಟಿಗೆಯನ್ನು ಮುಂದಿಟ್ಟ. ಆಶ್ಚರ್ಯ! ಹುಡುಗಿ ತಕ್ಷಣವೇ ಅದರ ಮೇಲೆ ತನ್ನ ಬಲಗಾಲಿಟ್ಟಳು.

''ಸೈಜು ಎಂಟು ಸಾರ್... ಯಾವುದು ಬೇಕೋ ಸೆಲೆಕ್ಟ್ ಮಾಡಿ...'' ಎಂದ ಅಂಗಡಿಯವನು.

ನನಗೆ ಹೆಚ್ಚು ಸಮಯ ತೆಗೆದುಕೊಳ್ಳುವುದು ಇಷ್ಟವಿರಲಿಲ್ಲ. ಮನಸ್ಸಿನೊಳಗೆ ಎಂತಹುದೋ ಹೆದರಿಕೆಯಿತ್ತು. "ವಸೂ... ನಿನಗೆ ಯಾವುದು ಇಷ್ಟ... ತೆಗೆದುಕೋ..." ಎಂದು ಪರೀಕ್ಷಿಸಲೆಂದೇ ಕೇಳಿದೆ. ಹುಡುಗಿ ''ಓಕೆ ಡಾರ್ಲಿಂಗ್'' ಅಂದವಳೇ ಅಲ್ಲೇ ಇದ್ದ ನಸುಗೆಂಪು ಬಣ್ಣದ ಮಹಿಳೆಯರ ಚಪ್ಪಲಿಯನ್ನು ತೋರಿಸಿದಳು. ಅಂಗಡಿಯವನು ಚಪ್ಪಲಿ ತೆಗೆದು ''ಕೂತ್ಕೊಳ್ಳಿ ಮೇಡಂ... ಹಾಕಿ ನೋಡ್ತೀನಿ..." ಅಂದ. ನನಗೆ ಮತ್ತಷ್ಟು ಹೆದರಿಕೆಯಾಯಿತು. "ಬೇಡ... ಕೊಡಿ ಇಲ್ಲಿ.'' ಎಂದು ಹೇಳಿ ಚಪ್ಪಲಿ ತೆಗೆದುಕೊಂಡು ಹುಡುಗಿಯ ಕಾಲಿಗೆ ಹಾಕಿದೆ. ಸೈಜು ಸರಿಯಾಗಿತ್ತು. ತಡಮಾಡದೇ ದುಡ್ಡು ಕೊಟ್ಟು ಹುಡುಗಿಯನ್ನು ಕಾರು ಹತ್ತಿಸಿದೆ. ಯಾರೇ ನೋಡಿದರೂ ಅನುಮಾನ ಬರಲಾರದು ಎಂಬ ನಿರಾಳ ಭಾವ ನನ್ನದಾಗಿತ್ತು.

ಅಪಾರ್ಟ್‌ಮೆಂಟಿನ ಒಳಗೆ ಬಂದು ಕಾರನ್ನು ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದೆ. ಇಬ್ಬರೂ ಕೆಳಗಿಳಿದೆವು. ಫ್ಲ್ಯಾಟಿಗೆ ಕರೆದುಕೊಂಡು ಹೋಗುವ ಮುನ್ನ ಅಪಾರ್ಟ್‌ಮೆಂಟಿನ ಸುತ್ತ ಒಂದು ಸುತ್ತು ಹಾಕೋಣವೆನ್ನಿಸಿತು. ''ವಸೂ ಹೇಗಿದೆ ಅಪಾರ್ಟ್‌ಮೆಂಟ್?'' ಎಂದು ಕೇಳಿದೆ. "ವಾವ್! ಸೂಪರ್ಬ್..." ಎಂದು ಹೇಳಿ ಮುಗುಳ್ನಕ್ಕಳು. "ಒಂದು ಸುತ್ತು ಹಾಕಿ ಬರೋಣ ಬಾ..." ಎಂದು ಮುಂದೆ ನಡೆದೆ. "ಓಕೆ ಡಾರ್ಲಿಂಗ್..." ಎಂದವಳು ನನ್ನ ಜೊತೆಗೂಡಿ ನಡೆಯತೊಡಗಿದಳು.

ಸ್ವಿಮ್ಮಿಂಗ್ ಪೂಲ್, ಕ್ಲಬ್ ಹೌಸ್, ಜಿಮ್‌ಗಳನ್ನು ನೋಡಿಕೊಂಡು ಎಲ್ಲಾ ಬ್ಲಾಕುಗಳನ್ನು ಸುತ್ತಿ